<u>ಅಸಲು ದಾವಾ ಸಂಖ್ಯೆ: **- 101/2021**</u> ಪಿ.ಡಬ್ಲ್ಯೂ**:-1**

ದಿನಾಂಕಃ **17-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು 4 ನೇ ತರಗತಿಯವರೆಗೆ ಸುರಹೊನ್ನೆ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮದುವೆಯಾಗಿ ಈಗ ಸುಮಾರು 30 ವರ್ಷ ಆಗಿರುತ್ತದೆ. ನನ್ನ ತಂದೆಯ ಹೆಸರು ಮಾಯಪ್ಪ ಮತ್ತು ನನ್ನ ತಾಯಿಯ ಹೆಸರು ಲಕ್ಷ್ಮಮ್ಮ. ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನು ಕೊಟ್ಟಿರುತ್ತೇನೆ. ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆಯಲ್ಲಿ ನನ್ನ ಯಜಮಾರು ಬಂದಿರುತ್ತಾರೆ. ಹಳದಮ್ಮರವರ ಮಗ ಮಂಜುನಾಥ ಹೊನ್ನಾಳಿ ಪಟ್ಟಣದ ವಾಸಿ ಸಹ ಈ ದಿನ ನಮ್ಮ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಿ ದಾಖಲೆಗಳನ್ನು ನಾನು ಪಡೆದುಕೊಂಡಿರುತ್ತೇನೆ. ಈ ದಾವೆಯನ್ನು ಸರ್ವೇ ನಂ.50 ರಲ್ಲಿರುವ 5 ಎಕರೆಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. ದಾವಾ ಆಸ್ತಿಯ ಚಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ನಮ್ಮ ತಂದೆಯ ತಂದೆಯಾದ ಬಸಪ್ಪ ರವರಿಗೆ ಸೇರಿದ್ದಾಗಿರುತ್ತದೆ. ನಮ್ಮ ಅಜ್ಜ ಬಸಪ್ಪರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾ ಪತ್ರದಲ್ಲಿ ದಾವಾ ಆಸ್ತಿಯು ನಮ್ಮ ಅಜ್ಜನಿಗೆ ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ನಮೂದಾಗಿರುತ್ತದೆ. ದಾವಾ ಆಸ್ತಿಯು ನಮ್ಮ ಅಜ್ಜನಿಗೆ ಮಂಜೂರಾಗಿರುವ ಬಗ್ಗೆ ದಾಖಲಾತಿಯನ್ನು ನಮ್ಮ ಮನೆಯಲ್ಲಿ ಹುಡುಕಬೇಕು ಸಿಕ್ಕಿದರೆ ಹಾಜರುಪಡಿಸುತ್ತೇನೆ. ನಮ್ಮ ತಾಯಿಯ ತವರು ಮನೆ ತಗ್ಗಿಹಳ್ಳಿ, ನಮ್ಮ ತಾಯಿಯವರು ಇಬ್ಬರು ಅಕ್ಕ ತಂಗಿಯರು ಅಂದರೆ ನನ್ನ ತಾಯಿ ಮತ್ತು ರತ್ನಮ್ಮ. ರತ್ನಮ್ಮ ಈಗ ಜೀವಂತ ಇರುವುದಿಲ್ಲ. ನನ್ನ ತಂದೆಯ ಅಕ್ಕನ ಹೆಸರು ಸಾವಿತ್ರಮ್ಮ. ನನ್ನ ತಂದೆಯ ಅಕ್ಕನ ಸಾವಿತ್ರಮ್ಮನಿಗೆ ಇಬ್ಬರು ಗಂಡು ಮಕ್ಕಳು ಅಂದರೆ ಮಂಜಪ್ಪ ಮತ್ತು ರಾಜಪ್ಪ. ನಮ್ಮ ಅಜ್ಜ ಬಸಪ್ಪರವರಿಗೆ ಇಬ್ಬರು ಗಂಡು ಮಕ್ಕಳು ಅಂದರೆ ನಮ್ಮ ತಂದೆ ಮಾಯಪ್ಪ ಮತ್ತು

ಬಸವರಾಜಪ್ಪ ಮತ್ತು ಇಬ್ಬರು ಹೆಣ್ಣು ಮಕ್ಕಳು ಅಂದರೆ ಗಂಗಮ್ಮ ಮತ್ತು ಸಾವಿತ್ರಮ್ಮ. ಈ ದಿನ ನಮ್ಮ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿರುವ ಮಂಜುನಾಥ ನಮ್ಮ ಸಂಬಂಧಿಕರು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.